**1077 ಶ್ರೀ ನರಸಿಂಹಸ್ವಾಮಿ ಜೆ. (ದೊಡ್ಡಬಳ್ಳಾಪುರ)** : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದೊಡ್ಡಬಳ್ಳಾಪುರ ನಗರವನ್ನು ದೊಡ್ಡಬಳ್ಳಾಪುರ ಅಭಿವೃದ್ಧಿ ಪ್ರಾಧಿಕಾರವನ್ನಾಗಿ ರಚನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಎಂದಿನಿಂದ ಅನುಷ್ಠಾನಗೊಳಿಸಲಾಗುವುದು?

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು)** :

ಅ) ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಯೋಜನಾ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ದೊಡ್ಡ ಬಳ್ಳಾಪುರ ನಗರವು ಸೇರುವುದರಿಂದ ದೊಡ್ಡಬಳ್ಳಾಪುರ ನಗರವನ್ನು ಅಭಿವೃದ್ಧಿ ಪ್ರಾಧಿಕಾರವನ್ನಾಗಿ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಉದ್ಭವಿಸುವುದಿಲ್ಲ.

**743 ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)** : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಮನಗರ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ವ್ಯಾಪ್ತಿಯ ಬಿಡದಿ ಮುಂತಾದ 8 ಪ್ರದೇಶಗಳಲ್ಲಿ ಟೌನ್‌ಷಿಪ್ ನಿರ್ಮಾಣ ಮಾಡುವ ಯೋಜನೆಯನ್ನು ಎಂದು ರೂಪಿಸಲಾಯಿತು, ಈ ಟೌನ್‌ಷಿಪ್ ಯೋಜನೆಯ ರೂಪುರೇಶೆಗಳೇನು?

ಆ) ಈ ಯೋಜನೆಯ ಪ್ರಗತಿ ಈಗ ಯಾವ ಹಂತದಲ್ಲಿದೆ?

ಇ) ಈ ಟೌನ್‌ಷಿಪ್ ನಿರ್ಮಾಣದ ಬಗ್ಗೆ ಈಗಿನ ಸರ್ಕಾರದ ನಿಲುವೇನು?

ಈ) ಯಾವ ಕಾಲಮಿತಿಯೊಳಗೆ ಈ ಟೌನ್‌ಷಿಪ್ ನಿರ್ಮಾಣ ಯೋಜನೆಯನ್ನು ಪೂರ್ಣಗೊಳಿಸಲಾಗುವುದು?

**ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯ ಮಂತ್ರಿಯವರು)** :

ಅ) ಸರ್ಕಾರದ ಆದೇಶ ಸಂಖ್ಯೆ : ನಅಇ 97 ಬಿಎಂಆರ್ 2006 ದಿನಾಂಕ: 18–10–2006ರಲ್ಲಿ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಈ ಕೆಳಕಂಡ 5 ಉಪನಗರಗಳನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಲಾಗಿದೆ.

1) ನಂದಗುಡಿ, ಹೊಸಕೋಟೆ ತಾಲ್ಲೂಕು,

2) ರಾಮನಗರ, ರಾಮನಗರ ತಾಲ್ಲೂಕು,

3) ಬಿಡದಿ, ರಾಮನಗರ ತಾಲ್ಲೂಕು,

4) ಸೋಲೂರು, ಮಾಗಡಿ ತಾಲ್ಲೂಕು,

5) ಸಾತನೂರು, ಕನಕಪುರ ತಾಲ್ಲೂಕು.

ಈ ಉಪನಗರಗಳನ್ನು ಬೆಂಗಳೂರು ನಗರದ ಮೇಲಿರುವ ಜನ ಸಂಖ್ಯೆ ಒತ್ತಡವನ್ನು ಹಾಗೂ ಸಾರಿಗೆ ಸಂಚಾರ ವ್ಯವಸ್ಥೆಯ ಒತ್ತಡವನ್ನು ಕಡಿಮೆ ಗೊಳಿಸುವ ಉದ್ದೇಶದಿಂದ ರೂಪಿಸಲಾಗಿದೆ. ಈ ಎಲ್ಲಾ ಉಪನಗರ ಗಳನ್ನು ಐಟಿ ಬಿಟಿ, ಆರೋಗ್ಯ ಮತ್ತಿತರ ಅಭಿವೃದ್ಧಿ ಕ್ಷೇತ್ರಗಳ ಆರ್ಥಿಕ ಚಟುವಟಿಕೆ ಗಳಿಗಾಗಿ 'ಕೆಲಸ–ಮನೆ–ಆಟ' (work-live-play) ಗಳ ಆಧಾರದ ಮೇಲೆ ರೂಪಿಸಲಾಗಿದೆ. ಇದರಿಂದಾಗಿ ಈ ಉಪನಗರಗಳಲ್ಲಿ ಕೆಲಸ ನಿರ್ವಹಿಸುವವರು ಬೆಂಗಳೂರಿನಿಂದ ಓಡಾಡದೆ ಅದೇ ಜಾಗದಲ್ಲಿದ್ದುಕೊಂಡು ಕೆಲಸ ನಿರ್ವಹಿಸುವಂತೆ ಮತ್ತು ಅವರ ಕುಟುಂಬಗಳಿಗೆ ಅಗತ್ಯವಾದ ಎಲ್ಲಾ ಸೌಕರ್ಯಗಳನ್ನು (ಅಂದರೆ ಶಾಲಾ–ಕಾಲೇಜು, ಆಸ್ಪತ್ರೆ, ವ್ಯಾಪಾರ ಮಳಿಗೆಗಳು ಮತ್ತಿತರ) ಅದೇ ಉಪನಗರದಲ್ಲಿ ಒದಗಿಸುವ ಕಾರಣ ಬೆಂಗಳೂರು ನಗರದ ಜನಸಂಖ್ಯೆಯನ್ನು ಮತ್ತು ಸಾರಿಗೆ ಒತ್ತಡ ಕಡಿಮೆ ಆಗುವುದು.

ಆ) ಸರ್ಕಾರದ ಆದೇಶ ಸಂಖ್ಯೆ : ನಅಇ 97 ಬಿಎಂಆರ್ 2006 ದಿನಾಂಕ: 18–10–2006ರಂತೆ ಬಿಡದಿ ಸಮಗ್ರ ಉಪನಗರ ಯೋಜನೆಯನ್ನು ಮೊದಲನೆಯ ಯೋಜನೆಗಾಗಿ (ಪೈಲೆಟ್ ಪ್ರಾಜೆಕ್ಟ್) ಅಭಿವೃದ್ಧಿಪಡಿಸಲು ಆದೇಶಿಸಲಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಒಬ್ಬ ಅಭಿವೃದ್ಧಿ ದಾರರನ್ನು ನೇಮಕ ಮಾಡಿಕೊಳ್ಳಲು ಜಾಗತಿಕ ಬಿಡ್‌ಗಳನ್ನು ಕರೆಯಲಾಗಿತ್ತು. ಇದಕ್ಕೆ ನಿಗಧಿಪಡಿಸಲಾಗಿದ್ದ ಅಂತಿಮ ದಿನಾಂಕ: 10–07–2007ರೊಳಗೆ ಮೆ: ಡಿಎಲ್ಎಫ್ ಲಿಮಿಟೆಡ್ ಮತ್ತು ಅದರ ಸಮೂಹ ಸಂಸ್ಥೆಯ ಒಂದೇ ಬಿಡ್ ಸ್ವೀಕೃತವಾಗಿದ್ದು, ಮೆ:ಡಿಎಲ್ಎಫ್ ಸಂಸ್ಥೆಗೆ "letter of intent" ಅನ್ನು ನೀಡಲಾಗಿತ್ತು. ಆದರೆ, ಈ ಮಧ್ಯೆ ಜಾಗತಿಕ ಹಿಂಜರಿತದ ಕಾರಣ ಮೆ: ಡಿಎಲ್ಎಫ್ ಸಂಸ್ಥೆಯು ಈ ಯೋಜನೆಯಿಂದ ಹಿಂದೆ ಸರಿದಿರುತ್ತಾರೆ.

ಇ) ಮರು ಟೆಂಡರ್ ಕರೆಯುವ ಕಾರ್ಯ ಪರಿಶೀಲನೆಯಲ್ಲಿದೆ.

ಈ) ಮರು ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಆಯ್ಕೆಯಾದ ಅಭಿವೃದ್ಧಿದಾರರೊಂದಿಗೆ ಅಭಿವೃದ್ಧಿ ಕರಾರು ಆದ 5 ರಿಂದ 7 ವರ್ಷದೊಳಗೆ ಮೊದಲನೇ ಉಪನಗರ ಯೋಜನೆಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.